ದಿನಾಂಕ : 10.08.2021 ಓ.ಎಸ್ ನಂ.84/2006 ರಲ್ಲಿ
ಪಿ.ಡಬ್ಲ್ಯೂ-1(ಹೆಂಜಾರಯ್ಯ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 4 ಮತ್ತು 5 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎ.ಎಸ್ ರವರಿಂದಃ

ನಿಪಿ-77 ಕ್ಕೆ ಸಂಬಂಧಪಟ್ಟ ಪ್ರಕರಣದಲ್ಲಿ ಯಾವ ಸರ್ವೇ ನಂಬರ್‌ಗಳ ಸ್ವತ್ತುಗಳಿದ್ದವು ಎಂದು ನನಗೆ ಗೊತ್ತಿಲ್ಲ. ನಿಪಿ-78 ಕ್ಕೆ ಸಂಬಂಧಪಟ್ಟ ಪ್ರಕರಣ ಏನಾಗಿತ್ತು ಎಂದರೆ ಸಾಕ್ಷಿಯು ದಾಖಲೆ ಏನುತ್ತು ಅದರಂತೆ ಎ.ಸಿ.ಯವರು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೇ ನಂ.122/3(ಎ), 122/3(ಬಿ), 92/1(ಎ), 122/4, 92/2(ಎ), 92/3, 92/2(ಬಿ), 92/7, 92/6, 92/4, 92/3, 95/1(ಎ) ಆಸ್ತಿಗಳಿಗೆ ಸಂಬಂಧಪಟ್ಟಂತೆ ನಮ್ಮ ಹೆಸರಿಗೆ ನಾವು ಅಕ್ರಮವಾಗಿ ಖಾತೆ, ವಗೈರೆ ಮಾಡಿಸಿಕೊಂಡ ಕಾರಣ ಶಿವಲಿಂಗಯ್ಯನವರು ನಿಪಿ-78 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಶಿವಲಿಂಗಯ್ಯ ಮತ್ತು ಸಿದ್ದಲಿಂಗಯ್ಯನವರಿಗೆ ಆಸ್ತಿ ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ನಾವು ಮೇಲೆ ಹೇಳಿದ ಸರ್ವೇ ನಂಬರ್ ಆಸ್ತಿಗಳ ಖಾತೆಯನ್ನು ಅಕ್ರಮವಾಗಿ ನಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೆವು ಎಂದರೆ ಸರಿಯಲ್ಲ. ಕಾರಣ ನಿಪಿ-78 ರಂತೆ ಶಿವಲಿಂಗಯ್ಯ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಿಪಿ-80 ಕ್ಕೆ ಸಂಬಂಧಪಟ್ಟ ಪ್ರಕರಣದಲ್ಲಿ ಈ ದಾವೆಯ 4 ಮತ್ತು 5 ನೇ ಪ್ರತಿವಾದಿಗಳು ತಕರಾರು ಸಲ್ಲಿಸಿದ್ದು ಸದರಿ ಪ್ರಕರಣದಲ್ಲೂ ಆಸ್ತಿಗಳು ಮೌಖಿಕವಾಗಿ ವಿಭಾಗವಾಗಿದ್ದು ಹೊರತು ವಿಭಾಗಪತ್ರದ ಮೂಲಕ ವಿಭಾಗವಾಗಿಲ್ಲ ಹಾಗೂ ಪಕ್ಷಗಾರರು ಆಸ್ತಿಗಳ ಅನುಭವದಲ್ಲಿದ್ದಾರೆ ಎಂಬ ಒಕ್ಕಣೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮೇಲಿನ ವ್ಯಾಮೋಹದಿಂದ ಅವುಗಳನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಈ ದಾವೆಯ

ದಿನಾಂಕ : 10.08.2021 ಓ.ಎಸ್ ನಂ.84/2006 ರಲ್ಲಿ
ಪಿ.ಡಬ್ಲ್ಯೂ-1(ಹೆಂಜಾರಯ್ಯ)

4 ಮತ್ತು 5 ನೇ ಪ್ರತಿವಾದಿಗಳಿಗೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಭಾಗ ಕೊಡದ ಕಾರಣ ಅವರು ನಿಪಿ-81 ಕ್ಕೆ ಸಂಬಂಧಪಟ್ಟ ಅಸಲುದಾವೆ ಸಂಖ್ಯೆ 120/2007 ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ, 4 ಮತ್ತು 5 ನೇ ಪ್ರತಿವಾದಿಗಳು ನನ್ನ ಸಂಬಂಧಿಕರಾದಾರೂ ಅವರಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಅವರಿಗೂ, ನಮಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯ ಸ್ವತ್ತುಗಳಲ್ಲೂ 4 ಮತ್ತು 5 ನೇ ಪ್ರತಿವಾದಿಗಳಿಗೆ ಹಕ್ಕು ಇದ್ದು ನಾವು ಅವರಿಗೆ ತಿಳಿಸದೇ 1 ಮತ್ತು 2 ನೇ ಪ್ರತಿವಾದಿಗಳ ಜೊತೆ ಪತ್ರ ವ್ಯವಹಾರ ನಡೆಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹಕ್ಕನ್ನು ಕಸಿದುಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.